ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರತಕ್ಕ ಖಾಲಿ ವೈದ್ಯರ ಹುದ್ದೆಗಳನ್ನು ಭರ್ತಿಮಾಡುವ ವಿಚಾರ

+ ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೇ, ನಾನು ಈ ಮೂಲಕ ತಮ್ಮಲ್ಲಿ ಹೇಳುವುದೇನೆಂದರೆ, ನನ್ನ ಕ್ಷೇತ್ರದ ಮುಖ್ಯಸ್ಥಾನವಾದ ಚೆನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಏಳು ಜನ ವೈದ್ಯರುಗಳ ಹುದ್ದೆ ಇದೆ. ಇದು ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು, ಆಗಿಂದಾಗ್ಗೆ ಬಹಳ ಅಪಘಾತವಾಗಿ ಆಸ್ಪತ್ರೆಗೆ ಹೋಗಿ ಅಲ್ಲಿ ವೈದ್ಯರಿಲ್ಲದೆ ಒದ್ದಾಟವಾಗಿ ಪ್ರಾಣ ಹೋಗಿರುವಂಥ ಸನ್ನಿವೇಶಗಳು ಕೂಡ ಉಂಟು. ನಾನೂ ಕೂಡ 10-12 ತಿಂಗಳುಗಳು ನನ್ನ ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ ಆಸ್ಪತ್ರೆಯಲ್ಲಿ ಇದ್ದಾಗ ಕೂಡ ನಾನು ಇದನ್ನು ಫೋನ್ ಮೂಲಕ ಹೇಳಿದ್ದೆ. ನಾನು ಆರೋಗ್ಯ ಸಚಿವರಲ್ಲಿ ಗಮನ ಸೆಳೆಯುತ್ತೇನೆ, ಅಲ್ಲಿ ಇವತ್ತಿನವರೆಗೆ ಏಳು ಜನ ವೈದ್ಯರುಗಳಲ್ಲಿ ಕನಿಷ್ಟ 4-5 ಜನ ವೈದ್ಯರುಗಳನ್ನು ಕೂಡ ಹಾಕುವುದಕ್ಕೆ ಆಗಿಲ್ಲ. ನಾನು ಒಬ್ಬ ಶಾಸಕನಾದವನು ಇವತ್ತು ಸರ್ಕಾರದಲ್ಲಿ ಹತ್ತಾರು ಲಕ್ಷ ರೂಪಾಯಿಗಳ ಅಥವಾ ಕೋಟ್ಯಾಂತರ ರೂಪಾಯಿಗಳ ಕೆಲಸವನ್ನು ನಾಳೆಯೇ ಮಂಜೂರು ಮಾಡಿ ಎಂದು ಹೇಳದೇ ಇದ್ದರೂ ಕೂಡ, ಅಲ್ಲಿಗೆ ಇರುವಂಥ ವೈದ್ಯರುಗಳನ್ನು ಹಾಕಿ. ನಮ್ಮ ತಾಲ್ಲೂಕಿನಲ್ಲಿರುವವರನ್ನಾದರೂ ಹಾಕಿ ಅಥವಾ ಹೊರಗಡೆಯಿಂದಾದರೂ ಹಾಕಿ ಅಥವಾ ಕನಿಷ್ಟ ನಾವು ಕೊಟ್ಟವರನ್ನಾದರೂ ಹಾಕಿ. ಒಟ್ಟಿನಲ್ಲಿ 4-5 ಜನ ವೈದ್ಯರನ್ನು ಕೂಡಲೇ ಕೊಡಬೇಕು ಇವತ್ತು ಏಳು ಜನ ವೈದ್ಯರುಗಳಲ್ಲಿ ಒಬ್ಬರೂ ಇಲ್ಲ ಎಂದರೆ ಜನಗಳಿಗೆ ಸಮಸ್ಯೆಯಾಗುತ್ತದೆ. ಆದ್ದರಿಂದ, ದಯಮಾಡಿ ಸರ್ಕಾರ ಇದಕ್ಕೆ ಉತ್ತರವನ್ನು ಕೊಡಬೇಕು ಎನ್ನುವಂಥ ಮಾತನ್ನು ಹೇಳಿ, ಸುಮ್ಮನೆ ಹಾರಿಕೆಯ ಉತ್ತರ ಕೊಟ್ಟು ಇಲ್ಲಿಂದ ಕಳುಹಿಸುವುದಾದರೆ, ನಾವೇ ನಮ್ಮ ಜನರನ್ನು ನಮಗೆ ಓಟು ಕೊಟ್ಟಿದ್ದಕ್ಕಾಗಿ ಕ್ಷಮೆ ಕೇಳುತ್ತೇವೆ ಎಂದು ನಾನು ನೊಂದು, ನನ್ನ ಹೃದಯ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಒಂದೂವರೆ ವರ್ಷದಿಂದ ಕೇಳುತ್ತಿದ್ದೇನೆ, ಇನ್ನು ಯಾವ ದೇವರಿಗೆ ಕೈ ಮುಗಿಯಬೇಕು ಎಂದು ನನಗೆ ಗೊತ್ತಾಗುತ್ತಿಲ್ಲ. ಇದರಲ್ಲಿ ನಾನು ಅಸಹಾಯಕನಾಗಿದ್ದೇನೆ. ಆದ್ದರಿಂದ ದಯಮಾಡಿ ಅಲ್ಲಿಗೆ ಎಷ್ಟು ತಾರೀಖಿನೊಳಗೆ ಏಳು ಜನ ವೈದ್ಯರಲ್ಲಿ ಕನಿಷ್ಟ 4-5 ವೈದ್ಯರುಗಳನ್ನಾದರೂ ಹಾಕುತ್ತೀರಿ ಎನ್ನತಕ್ಕಂಥ ಭರವಸೆಯನ್ನು ಕೊಟ್ಟು, ಅದನ್ನು ಈ ಸರ್ಕಾರ ಈಡೇರಿಸಬೇಕು ಮತ್ತು ಇದರ ಜೊತೆಗೆ ನನ್ನ ತಾಲ್ಲೂಕಿನಲ್ಲಿ ಅಣತಿ ಎನ್ನುವ ಒಂದು ಊರು ಇದೆ. ಅಲ್ಲಿ ಆಸ್ಪತ್ರೆ ಮಂಜೂರಾಗಿದೆ ಎಂದು ಡಿ.ಹೆಚ್.ಓ. ಕೂಡ ಅಲ್ಲಿಗೆ ಹೋಗಿ ಒಂದು ಕಟ್ಟಡ ತೋರಿಸಿ ಸುಣ್ಣಬಣ್ಣ ಹೊಡೆಯಿರಿ, ವೈದ್ಯರು ಬರುತ್ತಾರೆ ನಿಮ್ಮ ಆರೋಗ್ಯ ಸಚಿವರಿಗೆ ಮತ್ತು ನಿಮ್ಮ ಶಾಸಕರಿಗೆ ಹೇಳಿ ಒಂದು ಸಮಾರಂಭ ಮಾಡಿ ಎಂದು ಹೇಳಿಬಿಟ್ಟರು. ಅನಂತರ ಅದು ಮಿಸ್ಟೇಕ್ ಆಗಿ ಆ ಊರಿನಲ್ಲಿ ಅಲ್ಲ, ಬೇರೆ ಊರಿನಲ್ಲಿ ಎಂದು ಹೇಳಿದರು. 1995-96ನೇ ಇಸವಿಯಲ್ಲಿ ಮಂಜೂರಾಗಿದೆ ಎಂದು ಹೇಳಿದ್ದನ್ನು, 1996 97ನೇ ಇಸವಿಯಲ್ಲಿ ಕೂಡ ಹೊಸ ಆಸ್ಪತ್ರೆಯನ್ನು ಕೊಡುವಾಗ ಈ ಆಸ್ಪತ್ರೆಯನ್ನು ಬಿಟ್ಟಿದ್ದಾರೆ. ಈ ಜನಗಳು, ಪುಟ್ಟೇಗೌಡರೇ, ಆರೋಗ್ಯ ಇಲಾಖೆಯ ಅಧಿಕಾರಿಗಳು ಬಂದು ನಿಮ್ಮ ಊರಿಗೆ ಆಸ್ಪತ್ರೆ ಮಂಜೂರಾಗಿದೆ ಎಂದು ಹೇಳಿದಾಗ ನೀವು ಆಗಿಲ್ಲ ಎಂದು ಹೇಳುತ್ತೀರಿ, ನಾವು ನಿಮಗೆ ಓಟು ಕೊಟ್ಟಿಲ್ಲವೇ? ಎಂದು ಕೇಳುತ್ತಾರೆ. ಆದ್ದರಿಂದ ದಯಮಾಡಿ ಅದನ್ನು ಮಂಜೂರು ಮಾಡಿಕೊಡಬೇಕ

ಚೆನ್ನರಾಯಪಟ್ಟಣಕ್ಕೆ ವೈದ್ಯರನ್ನು ಹಾಕುವುದು ಆಗುವುದಿಲ್ಲ ಎಂದರೆ ನಾವು ವಿಧಾನಸೌಧದ ಮುಂದೆ ನಿಂತು ಕಣ್ಣೀರು ಹಾಕಬೇಕಾಗುತ್ತದೆ. ಇದಕ್ಕೆ ದಯಮಾಡಿ ಖಡಾಖಂಡಿತವಾಗಿ ಉತ್ತರ ಕೊಡಬೇಕು. ಹಾರಿಕೆಯ ಉತ್ತರವನ್ನು ನಾವು ನಿರೀಕ್ಷೆ ಮಾಡುವುದಿಲ್ಲ.

ಉಪಾಧ್ಯಕ್ಷರು : ಮಹದೇವಪ್ಪನವರೇ ತಾವು ನಿರ್ದಿಷ್ಟವಾದ ಉತ್ತರ ಹೇಳಿ. ಅವರು ಮನಸ್ಸಿಗೆ ಬಹಳ ಬೇಜಾರು ಮಾಡಿಕೊಂಡಿದ್ದಾರೆ.

ಡಾ|| ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಚೆನ್ನರಾಯಪಟ್ಟಣದಲ್ಲಿ ವೈದ್ಯರುಗಳಿಲ್ಲ, ಇದರಿಂದ ತೊಂದರೆಯಾಗುತ್ತಿದೆ, ಸಾರ್ವಜನಿಕರು ಕಷ್ಟ ಅನುಭವಿಸುತ್ತಿದ್ದಾರೆ, ಪ್ರತಿನಿಧಿಗಳಾದ ನಾವು ಅಲ್ಲಿಗೆ ಹೋಗಲು ಜನರಿಗೆ ಹೇಳಲು ಸಾಧ್ಯವಾಗುತ್ತಿಲ್ಲ ಎಂದು ಸನ್ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು, ಅವರ ಅಂತರಾಳವನ್ನು, ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಅವರಿಗೇ ಗೊತ್ತಿರುವ ಹಾಗೆ, ನಾವು ಈಗಾಗಲೇ 1991ನೇ ಇಸವಿಯಿಂದ ಆರೋಗ್ಯ ಇಲಾಖೆಯಲ್ಲಿ ನೀತಿಯನ್ನು ಮಾಡಬೇಕು ಎಂದು ಹಿಂದಿನ ಸರ್ಕಾರ ಪ್ರಯತ್ನ ಪಟ್ಟರೂ ಕೂಡ, ಈ ಒಂದು ಪಾಲಿಸಿಯನ್ನು ಅನುಷ್ಠಾನ ಮಾಡಲು ಸಾಧ್ಯವಾಗದೇ ಇದ್ದಂಥ ಒಂದು ಸನ್ನಿವೇಶ ಇತ್ತು. ಈ ಬಾರಿ ರಾಜಕೀಯವಾಗಿ ಎಷ್ಟೋ ಒತ್ತಡಗಳನ್ನು ತಂದರೂ ಕೂಡ, ವೈದ್ಯರ ಜೇಷ್ಠತೆ ಮತ್ತು ತಜ್ಞತೆಗೆ ಅನುಗುಣವಾಗಿ ಅವರ ತಜ್ಞತೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರ ಮುಖಾಂತರ ಜನರಿಗೆ ಸಹಾಯ ಮಾಡಬೇಕು ಎಂದು ಈ ವರ್ಗಾವಣೆಯ ನೀತಿಯನ್ನು ವಿಶಿಷ್ಟವಾಗಿ ಆರೋಗ್ಯ ಇಲಾಖೆಯಲ್ಲಿ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಹೀಗೆ ಮಾಡಿದಂಥ ಸಂದರ್ಭದಲ್ಲಿ ಕೆಲವು ಒತ್ತಡಗಳು ಕೂಡ ಬರುತ್ತಿವೆ. ಶಾಸಕರು ರಾಜಕೀಯವಾಗಿ ಪ್ರವೇಶ ಮಾಡದಿದ್ದರೆ, ವೈದ್ಯರ ತಜ್ಞತೆ ಮತ್ತು ಜೇಷ್ಠತೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನಾನು ಕಠಿಣವಾದಂಥ ಕ್ರಮವನ್ನು ಕೈಗೊಳ್ಳುತ್ತೇನೆ. ಯಾರೇ ಶಾಸಕರು ನಮ್ಮ ಮೇಲೆ ಒತ್ತಡವನ್ನು ತರದೇ ಇದ್ದರೆ 20 ದಿನದಲ್ಲಿ ಇದನ್ನು ಸರಿ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇನೆ. ಎನ್ನತಕ್ಕಂಥ ಮಾತನ್ನು ತಮಗೆ ಹೇಳುತ್ತೇನೆ. ಅದರ ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇರತಕ್ಕಂಥ ವೈದ್ಯರ ಹುದ್ದೆಗಳನ್ನು ತುಂಬಲು ಈಗಾಗಲೇ 600 ಜನ ವೈದ್ಯರನ್ನು ನೇಮಕ ಮಾಡಿ ಪೋಸ್ಟಿಂಗ್ ಕೊಡುತ್ತಿದ್ದೇವೆ. ಅವರು ಅವರ ಜಾಗಗಳಿಗೆ ಹೋಗಿ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಯಾರು ಸರ್ಕಾರದ ಆಜ್ಞೆಯನ್ನು ಉಲ್ಲಂಘನೆ ಮಾಡುತ್ತಾರೆ ಅವರ ವಿರುದ್ಧ ಶಿಸ್ತಿನ ಕ್ರಮವನ್ನು ನಾನು ಕೈಗೊಳ್ಳುತ್ತೇನೆ. ಅಲ್ಲಿ ಏಳು ಜನ ವೈದ್ಯರ ಹುದ್ದೆಗಳು ಖಾಲಿ ಬೀಳಲು ಅವಕಾಶ ಕೊಡುವುದಿಲ್ಲ. ಈ ಶಾಸನಸಭೆ ಮುಗಿಯುವುದರೊಳಗೆ ಅಲ್ಲಿಗೆ ವೈದ್ಯರನ್ನು ತುಂಬಲು ನಾನು ಕ್ರಮಕೈಗೊಳ್ಳುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ನೀವು ಮಾಡಿರುವ ಪಾಲಿಸಿ ಸರಿ ಇಲ್ಲ ಎಂದು ನಾನು ಹೇಳುವುದಿಲ್ಲ. ಈ ಸರ್ಕಾರ ಬಂದ ಮೇಲೆ ಒಂದು ಸಿದ್ಧಾಂತವನ್ನು ಮಾಡಿತು. ಈಗ ಯಾರೂ ಹಳ್ಳಿಯಲ್ಲಿ ವೈದ್ಯರು ಇರುವುದಿಲ್ಲ. ಅವರೆಲ್ಲರೂ ಪ್ರೈವೇಟ್ ಶಾಪ್ ಇಟ್ಟುಕೊಂಡು, ಅವರ ಜೀವನ ಚೆನ್ನಾಗಿ

ನಡೆಯುತ್ತಿದೆ. ಅವರು ಅಲ್ಲಿಂದ ಹೊರಟು ಹೋಗುತ್ತಾರೆ. ಅದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟು ಕಾಂಟ್ರಾಕ್ಟ್‌ನಲ್ಲಿ ಹಳ್ಳಿಗಾಡುಗಳಲ್ಲಿ ವೈದ್ಯರುಗಳನ್ನು ತುಂಬಲು ಒಂದು ಪಾಲಿಸಿ ಮಾಡಿದ್ದಾರೆ. ಅದರಿಂದ ಹಳ್ಳಿಗಾಡಿನಲ್ಲಿ ವೈದ್ಯರುಗಳನ್ನು ತುಂಬಲು ಒಂದು ಅವಕಾಶವಾಗಿದೆ. ಸರ್ಕಾರ ಮಾಡಿರತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ತಾಲ್ಲೂಕು ಹೆಡ್‌ಕ್ವಾರ್ಟರ್ ಆಸ್ಪತ್ರೆಗಳಿಗೆ, ಜಿಲ್ಲಾ ಹೆಡ್‌ಕ್ವಾರ್ಟರ್ ಆಸ್ಪತ್ರೆಗಳಿಗೆ ಜೇಷ್ಠತೆ ಮೇಲೆ ವೈದ್ಯರನ್ನು ತುಂಬಲು ನೀವು ಏನು ಪಾಲಿಸಿ ಮಾಡಿದ್ದೀರಿ, ಅದನ್ನು ನಾವು ಇಲ್ಲ ಎಂದು ಹೇಳುತ್ತಿಲ್ಲ. ಒಂದೂವರೆ ವರ್ಷದಿಂದ ನಾನು ಒಬ್ಬನೇ ಅಲ್ಲ, ಬಹಳ ಜನ ಶಾಸಕರು ಯಾವಾಗ ನೀವು ವೈದ್ಯರನ್ನು ಹಾಕುತ್ತೀರಿ ಎಂದು ಕೇಳಿದ್ದಾರೆ. ಇವತ್ತು ನನ್ನ ಕ್ಷೇತ್ರದಲ್ಲಿ ಇದ್ದಂಥ ಒಬ್ಬ ಹೆಣ್ಣು ಮಗಳನ್ನು, ಕೆಪಿಎಸ್‌ಸಿ ಯಲ್ಲಿ ಆಯ್ಕೆಯಾದ ಆಕೆಯನ್ನು ನಮ್ಮ ಜಿಲ್ಲೆಗೇ ಕೊಟ್ಟಿದ್ದಾರೆ. ಆಕೆಯನ್ನು ಡೆಪ್ಯುಟೇಷನ್ ಮೇಲಾದರೂ ನಮ್ಮಲ್ಲಿಗೆ ಕಳುಹಿಸಿ. ಚೆನ್ನರಾಯಪಟ್ಟಣಕ್ಕೆ ಯಾರು ಹೆರಿಗೆ ಪೇಷೆಂಟ್ ಬರುತ್ತಾರೆ, ಅವರನ್ನು ಅಧಿವೇಶನ ಮುಗಿಯುವವರೆಗೆ ತಡೆಯಿರಿ ಎಂದು ಹೇಳುವುದಕ್ಕೆ ಆಗುತ್ತದೆಯೇ? 9 ತಿಂಗಳು ಆಗಿರುವವಳನ್ನು, ಹೆರಿಗೆ ಆಗುವುದನ್ನು ತೆಡೆ ಎಂದು ಹೇಳುವುದಕ್ಕಾಗುತ್ತದೆಯೇ? ದಯಮಾಡಿ ನೀವು ಈ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಬೇಕು. ಇವತ್ತು ಮುಖ್ಯಮಂತ್ರಿಗಳಿಂದ ಒಂದು ಲೆಟರ್ ತೆಗೆದುಕೊಂಡು ಹೋದರೆ ನಿಮ್ಮ ಅಧಿಕಾರಿಗಳು, ಆರೋಗ್ಯ ಸಚಿವರು ಹೇಳಬೇಕು, ಅಲ್ಲಿಯವರೆಗೆ ನಾವು ಮಾಡುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ಕನಿಷ್ಪ ಡೆಪ್ಯುಟೇಷನ್ ಅರೇಂಜ್‌ಮೆಂಟ್ ಆದರೂ ಮಾಡಬೇಕು ಅಥವಾ ನಾವು ಕೊಟ್ಟ ವೈದ್ಯರನ್ನಾದರೂ ಹಾಕಬೇಕು, ಇಲ್ಲವೆಂದರೆ ನಿಮ್ಮ ಹತ್ತಿರ ಇರುವ ವೈದ್ಯರನ್ನಾದರೂ ಹಾಕಬೇಕು ಅಥವಾ ನಾವೇನಾದರೂ ಈ ಪಾಪದ ಕೈಯಿಂದ ಬೇರೆ ಯಾರ ಹತ್ತಿರವಾದರೂ 5,000, 10,000 ತೆಗೆದುಕೊಂಡು ಬಂದು ವೈದ್ಯರುಗಳನ್ನು ಕರೆದುಕೊಂಡು ಬಂದರೆ, ನಾವು ನಾಳೆಯಿಂದ ಈ ಶಾಸನಸಭೆಗೆ ಬರುವುದಿಲ್ಲ. ನಮ್ಮನ್ನೆಲ್ಲಾ ಛೀಮಾರಿ ಹಾಕಿ ಕಳುಹಿಸುತ್ತಾರೆ. ನಮ್ಮ ಕ್ಷೇತ್ರದಲ್ಲಿ ಕನಿಷ್ಠ ಒಬ್ಬ ವೈದ್ಯರಿಲ್ಲದೆ ಜನ ನಮ್ಮ ಹತ್ತಿರ ಬಂದು ಕಣ್ಣೀರು ಹಾಕುವಂಥ ಪರಿಸ್ಥಿತಿಇದೆ. ಇದ್ನು ನಾವು ತೆಡೆದುಕೊಳ್ಳಲು ಆಗುವುದಿಲ್ಲ. ಸುಮ್ಮನೆ ಸಮಾಧಾನವನ್ನು ಹೇಳಬಹುದು ಬಿಡಿ. ಶಾಸನಸಭೆಯಲ್ಲಿ ಸಮಾಧಾನ ಹೇಳುವುದು, ಮುಂದುಗಡೆ ಬೆಂಚಿನಲ್ಲಿರುವ ಆ ಕಡೆ ಈ ಕಡೆಯಿಂದ ಬಹಳಷ್ಟು ಚರ್ಚೆ ನಡೆಯುತ್ತದೆ, ಗಂಭೀರವಾದಂಥ ವಿಚಾರಗಳು ಇರುತ್ತವೆ. ನಾವೆಲ್ಲಾ ಹಿಂದುಗಡೆ ಕೂರುತ್ತೇವೆ. ನಾವು ಹಿಂದುಗಡೆ ಕೂರುವಂಥವರು ಕಮಿಷ್ಪ ನಮ್ಮ ಊರಿನಲ್ಲಿ ಒಬ್ಬ ವೈದ್ಯರಿಲ್ಲ ಎಂದರೆ ಜನ ಈ ಮನುಷ್ಯನನ್ನು ಯಾರು ಎಂ.ಎಲ್.ಎ. ಮಾಡಿದ್ದು? ಎಂದು ಹೇಳುತ್ತಾರೆ. ನಾವು ನಿಂತಿರತಕ್ಕಂಥ ಜಾಗ ಇದೆಯಲ್ಲ ನಾವು ಗೆದ್ದು ಬಂದಿರತಕ್ಕ ಜಾಗಗಳಲ್ಲಿ ಜನರಿಗೆ ಉತ್ತರ ಹೇಳಬೇಕಾಗುತ್ತದೆ. ನಾವು ಹುಷಾರು ಇಲ್ಲದಿದ್ದರೆ ಪರವಾಗಿಲ್ಲ, ನಮ್ಮ ಜನ ಅಲ್ಲದಿದ್ದರೆ ಆಗುವುದಿಲ್ಲ. ಇಲ್ಲಿದಿದ್ದರೆ ನೀವು ನನ್ನನ್ನು ನೋಡಲು ಆಸ್ಪತ್ರೆಗೆ ಬರಬೇಕಾಗುತ್ತದೆ, ಜನ ನನ್ನನ್ನು ಅಟ್ಯಾಕ್ ಮಾಡುತ್ತಾರೆ. ಇಲ್ಲವೆಂದರೆ ದಯಮಾಡಿ ನೀವು ಒಂದು ಸಲ ಭೇಟಿ ಕೊಡಿ ಇದು ಬಹಳ ಸೂಕ್ಷ್ಮವಾದ ವಿಚಾರ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಚೆನ್ನರಾಯಪಟ್ಟಣ ಒಂದೇ ಅಲ್ಲ, ಎಲ್ಲಾ ಕಡೆ ಈ ರೀತಿಯಾಗಿದೆ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ತಾವು ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ. 20 ದಿವಸ ಬೇಕಾಗಿಲ್ಲ. ಒಂದು ವಾರದಲ್ಲಿ ತಾವು ಅವರ ಅವಶ್ಯಕತೆಗಳನ್ನು ಪೂರೈಕೆ ಮಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ನಮಗೆ ಹಾರಿಕೆ ಉತ್ತರ ಬೇಕಾಗಿಲ್ಲ.

ಡಾ|| ಹೆಚ್.ಸಿ ಮಹದೇವಪ್ಪ : ಈಗಾಗಲೇ ನಾನು ಉತ್ತರವನ್ನು ಹೇಳಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಬರೀ ಆಶ್ವಾಸನೆ ಕೊಡುತ್ತಾರೆ, ಇದು ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ ನಮ್ಮಲ್ಲೂ ವಿಪ್ ಇದ್ದಾರೆ. ಆ ಕಡೆಯೂ ವಿಪ್ ಇದ್ದಾರೆ. ಸದಸ್ಯರುಗಳು ಯಾರೇ ಆಗಲಿ ಅವರು ಮಾತನಾಡತಕ್ಕಂಥ ಕಾಲದಲ್ಲಿ, ಅದು ಆಡಳಿತ ಪಕ್ಷದವರು ಇರಲಿ, ವಿರೋಧ ಪಕ್ಷದವರು ಇರಲಿ, ಮಾತನಾಡುವವರನ್ನು ಎಳೆದು, ಪಕ್ಕದಲ್ಲಿ ಹೋಗಿ ಕುಳಿತುಕೊಂಡು ಎಳೆದು ಕೂಡಿಸುವಂಥಾದ್ದು ಪದ್ಧತಿ ಅಲ್ಲ. ಪತ್ರಿಕೆಯಲ್ಲಿ ಇದನ್ನೇ ಬರೆಯುತ್ತಾರೆ ಅವರು ಮಾತನಾಡಲಿ ಸರ್ಕಾರ ಉತ್ತರ ಕೊಡುತ್ತದೆ.

4.40 ಪಿಎಂ

ಆಡಳಿತ ಪಕ್ಷದವರು ಯಾರೇ ಇರಲಿ, ಅವರ ನೋವನ್ನು ಅವರು ಹೇಳಿಕೊಳ್ಳುತ್ತಾರೆ.

ಉಪಾಧ್ಯಕ್ಷರು : ಅವರ ನೋವನ್ನು ಹೇಳಿಕೊಳ್ಳಲು ಬೇಡವೆಂದು ಯಾರೂ ಹೇಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ವಿಪ್ ಹೋಗಿ ಮೈಕ್ ಆಫ್ ಮಾಡಿ ಕೂರಿಸುತ್ತಿದ್ದಾರೆ.

ಉಪಾಧ್ಯಕ್ಷರು : ಆ ರೀತಿ ಮಾಡುತ್ತಿಲ್ಲ. ಮಾನ್ಯ ಬಂಗೇರರವರೆ ತಮ್ಮ ಸೀಟಿಗೆ ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ತಮಾಷೆಯಾಗಿ ಅಥವ ಬೇರೆ ದೃಷ್ಟಿಯಿಂದ ನಾನು ಹೇಳುವುದಿಲ್ಲ. ಸೂಕ್ಷ್ಮವಾಗಿ ಹೇಳಿದ್ದೇನೆ.

ಡಾ|| ಹೆಚ್. ಸಿ. ಮಹದೇವಪ್ಪ : ನಾನು ಈಗಾಗಲೆ ನಿರ್ದಿಷ್ಟವಾಗಿ ಉತ್ತರ ಕೊಟ್ಟಿದ್ದೇನೆ.

ಉಪಾಧ್ಯಕ್ಷರು : ತಾವು ಸದಸ್ಯರ ಭಾವನೆಗಳನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ತಾವು ಸಮಯ ಕೇಳಿದ್ದೀರಿ, ಒಬ್ಬರು ವೈದ್ಯರನ್ನು ಹಾಕಲು ಇಪ್ಪತ್ತು ದಿವಸ ಸಮಯವೇಕೆ? ಸದಸ್ಯರು ಎಷ್ಟು ನೋವಿನಿಂದ ಹೇಳುತ್ತಾರೋ ಅದನ್ನು ಅರ್ಥಮಾಡಿಕೊಂಡು ಒಂದು ವಾರದಲ್ಲಿ ವೈದ್ಯರನ್ನು ಹಾಕಲು ಏರ್ಪಾಡು ಮಾಡಿ. ಅದರ ಬಗ್ಗೆ ಭರವಸೆಯನ್ನು ಕೊಡಿ.

ಡಾ|| ಹೆಚ್. ಸಿ. ಮಹದೇವಪ್ಪ : ನಾನು ಈಗಾಗಲೇ ಪಟ್ಟಿಯನ್ನು ಮಾಡಿದ್ದೇನೆ. ಅಲ್ಲಿಯವರನ್ನು ಇಲ್ಲಿ, ಇಲ್ಲಿಯವರನ್ನು ಅಲ್ಲಿ ಹಾಕಿ ಎಂದರೆ ಮಾಡಲು ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಗ್ರಾಮೀಣ ಪ್ರದೇಶದಲ್ಲಿರುವ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳಲು ವಿಶೇಷವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ವೈದ್ಯರುಗಳ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿರತಕ್ಕದ್ದು ವಾಸ್ತವಾಂಶ. ನಾನು ಈ ಹಿಂದೆ ವೈದ್ಯಕೀಯ ಇಲಾಖೆಯ ಸಚಿವನಾಗಿ ನನ್ನ ಅನುಭವವನ್ನು ಹೇಳಬೇಕೆಂದರೆ, ನಾವೇ ವೈದ್ಯರುಗಳ ವರ್ಗಾವಣೆಯ ಬಗ್ಗೆ ಶಿಫಾರಸ್ಸು ಮಾಡುತ್ತೇವೆ. ವೈದ್ಯರುಗಳು they are very influential people in the society ಅವರೆಲ್ಲರೂ ಸಹ ಪಟ್ಟಣ ಪ್ರದೇಶದಲ್ಲಿರಬೇಕೆಂದು ಬಯಸುತ್ತಾರೆ. ಮತ್ತು ಅಸೋಶಿಯೇಷನ್‌ನವರು ಕಳೆದ ಮೂವತ್ತು ವರ್ಷಗಳಿಂದ ಬಡ್ತಿಯನ್ನು ಕೊಡಬೇಕೆಂದು ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕೆ.ಪಿ.ಎಸ್.ಸಿ.ಯಿಂದ ವೈದ್ಯರುಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಡೆಪ್ಯೂಟಿ ಕಮೀಷನರ್‌ಗಳಿಗೆ ನೇಮಕ ಮಾಡಿಕೊಳ್ಳಲು ಅಧಿಕಾರ ಕೊಟ್ಟಿದ್ದೇವೆ. ಆದರೂ ಮಾನ್ಯ ಸದಸ್ಯರುಗಳಿಗೆ ತೊಂದರೆಯಿದೆ. ಈ ಸಮಸ್ಯೆಯನ್ನು ಆದಷ್ಟು ಬೇಗ ನಿವಾರಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ವೈದ್ಯರುಗಳ ನೇಮಕಾತಿಗೆ ಡೆಪ್ಯೂಟಿ ಕಮೀಷನರ್‌ಗಳಿಗೆ ಅಧಿಕಾರವನ್ನು ಕೊಟ್ಟಿರುವುದಾಗಿ ತಾವು ಹೇಳಿದ್ದೀರಿ. ಅದು ಸರಿ. ರಾಜ್ಯಮಟ್ಟದಲ್ಲಿ ಉದ್ಯೋಗವಿನಿಮಯ ಕಛೇರಿಯಲ್ಲಿ ನೋಂದಾವಣೆ ಮಾಡಿರುವ ಪಟ್ಟಿಯನ್ನು ಜಿಲ್ಲೆಗಳಿಗೆ ಕಳಿಸಿಕೊಡುತ್ತೀರಿ. ಅವರುಗಳು ಆ ಜಿಲ್ಲೆಗೆ ಬರುವುದೇ ಇಲ್ಲ. ಯಾರೂ ಬರಲೇ ಇಲ್ಲ. ಅದು practically failed. ಅದಕ್ಕೆ ಆಯಾಯ ಜಿಲ್ಲೆಯ ವೈದ್ಯರುಗಳ್ಯಾರು ಉದ್ಯೋಗವಿನಿಮಯ ಕಛೇರಿಯಲ್ಲಿ ನೋಂದಾವಣೆ ಮಾಡಿರುತಾರೋ ಅವರ ಪ್ಯಾನಲ್‌ನ್ನೇ ಡೆಪ್ಯೂಟಿ ಕಮೀಷನರ್‌ರವರಿಗೆ ಕಳಿಸಿದ್ದರೆ ಆ ಜಿಲ್ಲೆಯಲ್ಲಿ ಅವರು ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ತಾವು ಇಲ್ಲಿಯವರನ್ನು ಅಲ್ಲಿ ಕಳಿಸಿದರೆ ಅವರು ಹೋಗುವುದೇ ಇಲ್ಲ. That has happened.

ಉಪಾಧ್ಯಕ್ಷರು : ತಾವೇನು ಇತ್ತೀಚೆಗೆ ವೈದ್ಯರ ನೇಮಕಾತಿ ಮಾಡಿಕೊಂಡಿದ್ದೀರಿ ಅದರಲ್ಲಿ ಬೆಂಗಳೂರು ಕಡೆಯವರು ಜಾಸ್ತಿಯಾಗಿರುವುದರಿಂದ ಅವರು ಬೇರೆ ಕಡೆಗೆ ಹೋಗಲು ತಯಾರಾಗಿಲ್ಲ. ಅದನ್ನು ತಾವು ಗಮನಿಸಬೇಕು.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಹಿರಿಯ ಸದಸ್ಯರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿರವರು ಹೇಳಿದಂತೆ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡಿಕೊಳ್ಳುವುದನ್ನು ಸಧ್ಯಕ್ಕೆ ನಿಲ್ಲಿಸಿದ್ದೇವೆ. ಏಕೆಂದರೆ 600 ವೈದ್ಯರುಗಳು ಕೆ.ಪಿ.ಎಸ್.ಸಿ ಯಿಂದ ಆಯ್ಕೆಯಾದಮೇಲೆ ಅವರುಗಳು ಐದು ವರ್ಷ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ಮಾಡಲೇಬೇಕಾಗುತ್ತದೆ. ಆ 600 ವೈದ್ಯರುಗಳಲ್ಲಿ ಸುಮಾರು 300 ಜನರು ಬೆಂಗಳೂರು ಜಿಲ್ಲೆಯವರಾಗಿದ್ದಾರೆ. ಆದರೆ, ಬೆಂಗಳೂರಿನ ಸುತ್ತಮುತ್ತ ವೈದ್ಯರ ಹುದ್ದೆ ಖಾಲಿ ಇರತಕ್ಕದ್ದು ಕೇವಲ 40. ಒಂದು ಸಾವಿರ ಶಿಫಾರಸ್ಸು ಪತ್ರಗಳು ನನಗೆ ಬಂದಿದೆ. ನಾನು ಯಾರನ್ನು ಎಲ್ಲಿಗೆ ಪೋಸ್ಟ್ ಮಾಡಲಿ? ಗ್ರಾಮೀಣ ಪ್ರದೇಶಕ್ಕೆ ಯಾವ ರೀತಿಯಲ್ಲಿ ಸೌಲಭ್ಯವನ್ನು ಒದಗಿಸಲಿ? ಎಲ್ಲಾ ಮಾನ್ಯ

ಸದಸ್ಯರುಗಳು ನನಗೆ ಸಹಕಾರ ಕೊಡದಿದ್ದರೆ ವೈದ್ಯರ ಕ್ಷೇತ್ರದಲ್ಲಿ influential community ಯನ್ನು represent ಮಾಡಲು ಕಷ್ಟವಾಗುತ್ತದೆ. ಮಾನ್ಯ ಸದಸ್ಯರಾದ ಪುಟ್ಟೇಗೌಡರು ಬಹಳ ಪ್ರಾಮಾಣಿಕರು, ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ರೀತಿಯ ತಪ್ಪು ತಿಳುವಳಿಕೆ ಇಲ್ಲ. ಅವರ ಕ್ಷೇತ್ರಕ್ಕೆ ಮತ್ತು ರಾಜ್ಯದಲ್ಲಿ ಖಾಲಿ ಇರುವ ಎಲ್ಲಾ ಕಡೆ ವೈದ್ಯರುಗಳನ್ನು ತುಂಬಲು ಕ್ರಮ ತೆಗೆದುಕೊಂಡಿದ್ದೇನೆ. ಕೆ.ಪಿ.ಎಸ್.ಸಿಯಿಂದ ನೇಮಕಗೊಂಡಿರುವ 600 ವೈದ್ಯರುಗಳು ಗ್ರಾಮೀಣ ಪ್ರದೇಶಕ್ಕೆ ಹೋಗಲು ಪ್ರಾರಂಭ ಮಾಡಿದ್ದಾರೆ. ಅವರು ಕಾರ್ಯದರ್ಶಿಯವರಿಗೆ ಸರ್ಟಿಫಿಕೇಟ್‌ನ್ನು ಕೊಟ್ಟು ಡಿ.ಹೆಚ್.ಒ. ಕಛೇರಿಯಲ್ಲಿ ರಿಪೋರ್ಟ್ ಮಾಡಿಕೊಂಡು ಹೋಗುವುದು ಸ್ವಲ್ಪ ನಿಧಾನವಾಗುತ್ತದೆ. ಇಡೀ ರಾಜ್ಯದಲ್ಲಿ ಎಲ್ಲಾ ವೈದ್ಯರ ಹುದ್ದೆಗಳು ಸಹ ಖಾಲಿ ಇರುವ ಪರಿಸ್ಥಿತಿಯೇನಿಲ್ಲ. ವೈದ್ಯರುಗಳು ಎಲ್ಲೆಲ್ಲಿದ್ದರೋ ಅಲ್ಲೇ ಇದ್ದಾರೆ. ಮಾಡಿಫಿಕೇಷನ್ ಆಗುತ್ತದೆಂದು ಕಾಯುತ್ತಿದ್ದಾರೆ. ಮಾನ್ಯ ಸದಸ್ಯರನೇಕರು ಅವರ ತೊಂದರೆಗಳನ್ನು ಹೇಳಿದ್ದಾರೆ ಅದನ್ನು ಅಟೆಂಡ್ ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದೇವೆ. ಅದನ್ನು ಮಾಡಬೇಕಾದರೆ ಗೈಡ್‌ಲೈನ್ ಮೇಲೆಯೇ ಮಾಡಬೇಕಾಗುತ್ತದೆ. ಕಣ್ಣಿನ ವೈದ್ಯರನ್ನು ಕಾಲು, ಮೂಳೆ ವೈದ್ಯರ ಜಾಗಕ್ಕೆ, ಹಲ್ಲಿನ ವೈದ್ಯರನ್ನು ಪ್ರಸೂತಿ ವಿಭಾಗಕ್ಕೆ ಹಾಕಲು ಸಾಧ್ಯವಾಗುತ್ತದೆಯೇ? ಈ ವೈದ್ಯಕೀಯ ಕ್ಷೇತ್ರದಲ್ಲಿ ತಜ್ಞತೆಯನ್ನು ಪಡೆದುಕೊಂಡಿರುವ ಜನರನ್ನು ಬಳಸಿಕೊಂಡು ಜನರಿಗೆ ಸೇವೆಯನ್ನು ಎಷ್ಟು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತದೆ? ನಮಗೆ ಸರಿಯಾದ ಮಾಹಿತಿ ಇಲ್ಲದೆ ಒಂದೆರಡು ಪರ್ಸೆಂಟ್ ನ್ಯೂನತೆಗಳಾಗಿದೆ. ಅದನ್ನು ಸರಿಪಡಿಸಲು ಸೂಚನೆ ಕೊಟ್ಟಿದೇನೆ. ಅದನ್ನು ಸರಿಮಾಡಲು ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಅನೇಕ ಸದಸ್ಯರುಗಳು ಅವರವರ ಕ್ಷೇತ್ರದ ಸಮಸ್ಯೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಅದನ್ನು ಮಾಡಲು ಸೂಚನೆ ಕೊಟ್ಟಿದ್ದೇನೆ. ಒಂದು ವಾರದಲ್ಲಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕ ಮಾಡಿ ಕೊಳ್ಳಲು ವೈದ್ಯರ ಹುದ್ದೆ ಖಾಲಿ ಉಳಿದಿಲ್ಲ. 150-164 ವೈದ್ಯರ ಹುದ್ದೆಗಳು ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇವೆ. ಕನಿಷ್ಠ 250-300 ವೈದ್ಯರುಗಳ ಹುದ್ದೆಗಳನ್ನು ಖಾಲಿ ಇಡಲೇ ಬೇಕಾಗುತ್ತದೆ. ಇಲಾಖಾವತಿಯಿಂದ ಪ್ರತಿ ವರ್ಷ ಪಿ.ಜಿ. ಕೋರ್ಸ್ ಓದಲು ವೈದ್ಯರು ಹೋಗುವುದರಿಂದ, ಅವರು ವ್ಯಾಸಂಗದ ನಂತರ ಬಂದಾಗ ಜಾಗವನ್ನು ಕೊಡುವ ಉದ್ದೇಶದಿಂದ ಅಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಳ್ಳಬೇಕಾಗುತ್ತದೆ. ಖಾಲಿ ಇರುವ ಯಾವುದೇ ಕ್ಷೇತ್ರದಲ್ಲಿ ವೈದ್ಯರನ್ನು ತುಂಬದಿರುವ ಪ್ರಯತ್ನವನ್ನು ಮಾಡಿಲ್ಲ. ಖಾಲಿ ವೈದ್ಯರ ಹುದ್ದೆಗಳನ್ನು ತುಂಬಲು ಕಳೆದ ಎರಡೂವರೆ ವರ್ಷಗಳಲ್ಲಿ ನನ್ನ ಕೈಲಾದ ಪ್ರಯತ್ನ ಮಾಡಿದ್ದೇನೆ. ಮುಂದೆ ಕೂಡ ಮಾಡುತ್ತೇನೆ.

50ನೇ ವರ್ಷ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ 60 ವರ್ಷ ದಾಟಿದ ಖೈದಿಗಳಿಗೆ ಶಿಕ್ಷೆಯ ಅವಧಿ ಕಡಿಮೆಗೊಳಿಸುವುದು.

ಶ್ರೀ ಎ. ರಾಮ್‌ದಾಸ್ (ಕೃಷ್ಣರಾಜ್) : ಮಾನ್ಯ ಉಪಾಧ್ಯಕ್ಷರೆ, ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿದ್ದು ಈ ಸಂದರ್ಭದಲ್ಲಿ ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿರತಕ್ಕ ಅಧಿಕಾರಿ -ಗಳಿರಬಹುದು, ಸ್ವಾತಂತ್ರ್ಯ ಹೋರಾಟಗಾರರಿರಬಹುದು ಬಳುವಳಿಯಾಗಿ ಕೆಲವು ವಿಚಾರಗಳನ್ನು